ಆದ್ಯತೆ ಮೇಲೆ ಒದಗಿಸಬೇಕಾಗುತ್ತದೆ. ಯಾವ ಕಾಲೇಜು ಮೊದಲು ಪ್ರಾರಂಭವಾಯಿತು? ಯಾವ ಕಾಲೇಜಿನ ಕಟ್ಟಡ ನಿರ್ಮಾಣದ ಯಾವ ಹಂತದಲ್ಲಿದೆ? ಯಾವ ಹಂತದಲ್ಲಿದ್ದರೆ ಕಟ್ಟಡ ವನ್ನು ಪೂರ್ತಿಗೊಳಿಸಬಹುದು? ಇದನ್ನೆಲ್ಲಾ ನಾವು ಆದ್ಯತೆ ಮೇಲೆ ತೆಗೆದುಕೊಂಡು ಹಣ ವಿತರಣೆ ಮಾಡಬೇಕಾಗುತ್ತದೆ. ಒಟ್ಟಿನಲ್ಲಿ ಸರ್ಕಾರ ಈ ಕುರಿತು ಗಂಭೀರವಾಗಿ ಯೋಚಿಸುತ್ತಿದ್ದು, ಕಟ್ಟಡವನ್ನು ಒಂದೆರಡು ವರ್ಷಗಳಲ್ಲಿ ಯಾವ ರೀತಿ ಪೂರ್ಣಗೊಳಿಸ ಬಹುದೆಂಬ ಬಗ್ಗೆ ಯೋಜನೆಯನ್ನು ಕಂಡುಹಿಡಿಯುತ್ತಿದ್ದೇವೆ.

**ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ** :- ಹಾಗಾದರೆ, ಈ ಕಟ್ಟಡಕ್ಕೆ ಆದ್ಯತೆ ಇಲ್ಲವೆಂದು ಹೇಳಲಿ. ಕಾಲೇಜು ಪ್ರಾರಂಭವಾಗಿ ನಾಲ್ಕು ವರ್ಷವಾಗಿದ್ದರೂ ಕಟ್ಟಡ ಪೂರ್ಣಗೊಳಿಸು ವುದರ ಬಗ್ಗೆ ತಾವು ಆದ್ಯತೆ ಮೇಲೆ ತೆಗೆದುಕೊಳ್ಳುವುದಾಗಿ ಹೇಳುತ್ತಿರುವುದರಿಂದ ಯಾವುದು ಆದ್ಯತೆ ಮೇಲಿದೆ? ಯಾವುದಕ್ಕೆ ಆದ್ಯತೆ ಇಲ್ಲ ಎಂಬುದನ್ನಾದರೂ ಹೇಳಿದರೆ ನಾನು ಕುಳಿತುಕೊಳ್ಳುತ್ತೇನೆ.

**ಶ್ರೀ ಬಿ. ಸೋಮಶೇಖರ್** :- ಆದ್ಯತೆ ಇಲ್ಲವೆಂದು ನಾನು ಹೇಳುತ್ತಿಲ್ಲ. ಈಗಾಗಲೇ ಅದಕ್ಕೆ ಹಣ ಒದಗಿಸಿಕೊಟ್ಟಿದ್ದು, ಇನ್ನೂ ಹೆಚ್ಚಿನ ಹಣ ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದು, ಈ ದಿಸೆಯಲ್ಲಿ ಆದಷ್ಟು ಪ್ರಯತ್ನ ಮಾಡುತ್ತೇನೆ.

**ಡಾ : ಎಂ. ಪಿ. ಕರ್ಕಿ** :- ಕಾಲೇಜು ಕಟ್ಟಡ ಕಟ್ಟುವ ಸಲುವಾಗಿ ಯು.ಜಿ.ಸಿ. ಯವರು ಮ್ಯಾಚಿಂಗ್ ಗ್ರಾಂಟ್ ಎಂದು ಕೊಡುತ್ತಾರೆ. ಈ ಗ್ರಾಂಟ್‌ಅನ್ನು ಪಡೆದುಕೊಳ್ಳಲು ಸರ್ಕಾರವೇನಾದರೂ ಪ್ರಯತ್ನ ಮಾಡಿದೆಯೇ? ಕಾಲೇಜು ಕಟ್ಟಡ ಕಟ್ಟುವುದಕ್ಕೆಂದೇ ಶೇಕಡ ಐವತ್ತರಷ್ಟು ಗ್ರಾಂಟ್ ಬರುತ್ತದಾದ್ದರಿಂದ, ಇದರ ಬಗ್ಗೆ ತಾವೇನಾದರೂ ಕಾರ್ಯಪ್ರವೃತ್ತ ವಾಗಿದ್ದೀರೋ?

**ಶ್ರೀ ಬಿ. ಸೋಮಶೇಖರ್** :- ಅದರ ಬಗ್ಗೆಯೂ ಪರಿಶೀಲಿಸುತ್ತಿದ್ದೇವೆ. ಯು.ಜಿ.ಸಿ.ಯವರು ಯಾರ ರೂಪದಲ್ಲಿ ಹಣ ಕೊಡುತ್ತಾರೆ, ಅದನ್ನು ನಮ್ಮ ಸರ್ಕಾರ ಯಾವ ರೀತಿ ಪಡೆದುಕೊಂಡು ಉಪಯೋಗಿಸಿಕೊಳ್ಳುವುದರ ಬಗ್ಗೆ ಯೋಚಿಸುತ್ತಿದ್ದೇವೆ ಮತ್ತು ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಬೇರೆ ವಿಧಾನಗಳನ್ನೂ ಕಂಡುಹಿಡಿಯುತ್ತಿದ್ದೇವೆ.

**ಡಾ : ಎಂ.ಪಿ. ಕರ್ಕಿ** :- ಇಲ್ಲಿಯ ತನಕ ಯು.ಜಿ.ಸಿ.ಯವರು ಕೊಡುವ ಹಣವನ್ನು ಉಪಯೋಗಿಸಿಕೊಂಡಿದ್ದೀರೋ?

**ಶ್ರೀ ಬಿ. ಸೋಮಶೇಖರ್** :- ಯು.ಜಿ.ಸಿ.ಯಿಂದ ಎಷ್ಟು ಹಣವನ್ನು ಉಪ ಯೋಗಿಸಿ ಕೊಳ್ಳಲಾಗಿದೆ ಎಂಬುದರ ಬಗ್ಗೆ ಮಾಹಿತಿ ತರಿಸಿಕೊಂಡು ನೋಡುತ್ತೇನೆ.

**ವಿಷಯ :- ಕೊಡಗು ಜಿಲ್ಲೆ ಸೋಮವಾರ ಪೇಟೆ ತಾಲ್ಲೂಕಿನ ಆಲೂರು ಸಿದ್ದಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿರುವ ಹುದ್ದೆಗಳನ್ನು ಭರ್ತಿ.**

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 207 (1225)

ಶ್ರೀ ಆಪ್ಪಚ್ಚುರಂಜನ್ (ವೀರಾಜಪೇಟೆ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕು ಆಲೂರು ಸಿದ್ಧಾಪುರದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮಂಜೂರಾದ ಹುದ್ದೆಗಳು ಎಷ್ಟು? ಖಾಲಿ ಹುದ್ದೆಗಳು ಎಷ್ಟು ಇವೆ? ಯಾವುವು? ಅವನ್ನು ಯಾವಾಗ ಭರ್ತಿ ಮಾಡಲಾಗುವುದು?

ಆ) ಈ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಜೀಪು ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಜೀಪನ್ನು ಯಾವಾಗ ಒದಗಿಸಲಾಗುವುದು?

ಶ್ರೀ ಹೆಚ್. ಸಿ. ಮಹದೇವಪ್ಪ :- (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಆಲೂರು ಸಿದ್ದಾಪುರದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಒಟ್ಟು 6 ವಿವಿಧ ಹುದ್ದೆಗಳು ಮಂಜೂರಾಗಿದ್ದು ಅವುಗಳ ಪೈಕಿ ಈ ಕೆಳಕಂಡ ಮೂರು ಹುದ್ದೆಗಳು ಹಾಲಿ ಖಾಲಿ ಇವೆ.

1. ಫಾರ್ಮಾಸಿಸ್ಟ್ - 1 ಹುದ್ದೆ
2. ಕಿರಿಯ ಪ್ರಯೋಗಶಾಲಾ ತಂತ್ರಜ್ಞ - 1 ಹುದ್ದೆ
3. ಸಹಾಯಕರು ಹಾಗೂ ಬೆರಳಚ್ಚುಗಾರರು - 1 ಹುದ್ದೆ

ಈ ಖಾಲಿ ಹುದ್ದೆಗಳನ್ನು ತುಂಬಲು ಸಧ್ಯದಲ್ಲಿಯೇ ಕ್ರಮ ತೆಗೆದುಕೊಳ್ಳಲಾಗುವುದು.

ಆ) ಈ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಜೀಪು ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಕನಿಷ್ಠ ಅವಶ್ಯಕತೆ ಕಾರ್ಯಕ್ರಮದಡಿಯಲ್ಲಿ ಮಂಜೂರಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಜೀಪುಗಳನ್ನು ಒದಗಿಸಲಾಗುತ್ತಿಲ್ಲ. ಆದರೆ ಇತರೆ ಯೋಜನೆಗಳ ಡಿಯಲ್ಲಿ ರಾಜ್ಯದ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಕೇಂದ್ರ ಸರ್ಕಾರವು ವಾಹನಗಳನ್ನು ಸರಬರಾಜು ಮಾಡಿದಾಗ ಆಲೂರು ಸಿದ್ಧಾಪುರಕ್ಕೆ ವಾಹನವನ್ನು ಒದಗಿಸಲಾಗುತ್ತದೆ. ಈ ಬಗ್ಗೆ ಕ್ರಮ ತೆಗೆದುಕೊಳ್ಳಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಮಡಿಕೇರಿ ಇವರಿಗೆ ಆದೇಶ ನೀಡಲಾಗಿದೆ.

**ಶ್ರೀ ಎಂ. ಪಿ. ಅಪ್ಪಚ್ಚು ರಂಜನ್** :- ಮಾನ್ಯ ಅಧ್ಯಕ್ಷರೆ, ಪ್ರಶ್ನೆಗಳ ಪಟ್ಟಿಯಲ್ಲಿ ನನ್ನನ್ನು ವಿರಾಜಪೇಟೆಯ ಶಾಸಕನನ್ನಾಗಿ ಮತ್ತು ಒದಗಿಸಿರುವ ಉತ್ತರದ ಪಟ್ಟಿಯಲ್ಲಿ ಗಂಡಸಿ ಕ್ಷೇತ್ರದ ಶಾಸಕರನ್ನಾಗಿ ಮಾಡಿದ್ದಾರೆ. ನಾನು ಕೇಳಿರುವ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ಆಲೂರು ಸಿದ್ಧಾಪುರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಒಟ್ಟು ಆರು ವಿವಿಧ ಹುದ್ದೆಗಳು ಮಂಜೂರಾಗಿದ್ದು, ಅವುಗಳ ಪೈಕಿ ಫಾರ್ಮಾಸಿಸ್ಟ್, ಕಿರಿಯ ಪ್ರಯೋಗ ಶಾಲಾ ತಂತ್ರಜ್ಞ, ಸಹಾಯಕ ಹಾಗೂ ಬೆರಳಚ್ಚುಗಾರರ ತಲಾ ಒಂದೊಂದು ಹುದ್ದೆಗಳು ಖಾಲಿಯಿದ್ದು, ಸದರಿ ಹುದ್ದೆಗಳನ್ನು ತುಂಬಲು ಸಧ್ಯದಲ್ಲಿಯೇ ಕ್ರಮ ತೆಗೆದುಕೊಳ್ಳ ಲಾಗುವುದೆಂದು ತಿಳಿಸಿದ್ದಾರೆ. ಈ ಹುದ್ದೆಗಳನ್ನು ಯಾವಾಗ ಖಾಯಂಗೊಳಿಸುತ್ತೀರಿ? ಇದರಿಂದಾಗಿ ಸದರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿನ ಕೆಲಸ-ಕಾರ್ಯಗಳಿಗೆ

ಅಡ್ಡಿಯುಂಟಾಗಿದೆ. ಅಲ್ಲಿ ಆಸ್ಪತ್ರೆ ಇರುವುದೇ ಜನರಿಗೆ ಗೊತ್ತಿಲ್ಲ, ಅಂತಹ ಪರಿಸ್ಥಿತಿ ಯಲ್ಲಿದೆ. ಮೂರು ವರ್ಷಗಳಾದರೂ ಕೂಡ ಆಸ್ಪತ್ರೆಗೆ ಸರಿಯಾದ ವೈದ್ಯರನ್ನು ನೇಮಿಸಿಲ್ಲ. ಆಸ್ಪತ್ರೆ ಸುಮಾರು ಇಪ್ಪತ್ತೆದು ಕಿಲೋಮೀಟರ್‌ಗಳಷ್ಟು ದೂರವಿರುವುದರಿಂದ ಹೋಗಿ ಬರಲು ಒಂದು ಜೀಪಿನ ಸೌಲಭ್ಯ ಕಲ್ಪಿಸಿಕೊಡಬೇಕೆಂದು ಸರ್ಕಾರವನ್ನು ಕೋರಿದ್ದರೂ ಇದುವರೆವಿಗೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಇನ್ನೊಂದು ಪ್ರಾಮುಖ್ಯವಾದ ವಿಚಾರವೇನೆಂದರೆ, ವಿಶ್ವಬ್ಯಾಂಕಿನ ನೆರವಿನಿಂದ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ ಹಾಗೂ ವೈದ್ಯಾಧಿಕಾರಿಗಳಿಗೆ ವಸತಿ ಗೃಹಗಳಿಗೆ ಮತ್ತು ಐ.ಪಿ.ಪಿ. ಭಾರತೀಯ ಜನಸಂಖ್ಯೆ ಯೋಜನೆಯಡಿ ಹಣ ಮಂಜೂರಾಗಿದ್ದರೂ ಕೊಡಗು ಜಿಲ್ಲೆಯ ಇಂಜಿನಿಯರ್‌ಗಳು ಮತ್ತು ಅಲ್ಲಿ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿಗಳು ಯಾರಿದ್ದಾರೋ, ಅವರುಗಳಲ್ಲಿ ಪರಸ್ಪರ ಸರಿಯಾದ ರೀತಿಯಲ್ಲಿ ತಿಳುವಳಿಕೆ ಇಲ್ಲದಿರುವುದರಿಂದ ಇವೊತ್ತು ಕೊಡಗಿಗೆ ಬರುವಂಥ ಸುಮಾರು ಒಂದು ಕೋಟಿ 94 ಲಕ್ಷ ರೂಪಾಯಿಗಳಷ್ಟು ಅನುದಾನ ಕೈಬಿಟ್ಟು ಹೋಗುವ ಸಾಧ್ಯತೆ ಇದೆ.

ಕೊಡಗು ಜಿಲ್ಲೆಗೆ ಆರೋಗ್ಯ ಇಲಾಖೆಯ 31 ಸಬ್ ಸೆಂಟರ್‌ಗಳಿಗೆ ಪ್ರತಿಯೊಂದಕ್ಕೆ ಮೂರು ಲಕ್ಷದ ಪ್ರಕಾರ, ಎಂಟು ವೈದ್ಯಾಧಿಕಾರಿಗಳ ವಸತಿ ಗೃಹಕ್ಕೆ ಮೂರು ಲಕ್ಷದ ಪ್ರಕಾರ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ತಲಾ 11 ಲಕ್ಷದ ಪ್ರಕಾರ ಒಟ್ಟು ಒಂದು ಕೋಟಿ 94 ಲಕ್ಷ ರೂಪಾಯಿ ವಿಶ್ವಬ್ಯಾಂಕ್‌ನಿಂದ ಕೈಬಿಟ್ಟುಹೋಗುವ ಸ್ಥಿತಿ ಇದೆ. ಕೊಡಗು ಜಿಲ್ಲೆಯಲ್ಲಿರುವ ಆರವತ್ತು ಸಬ್ ಸೆಂಟರ್‌ಗಳಿಗೆ ಪ್ರತಿಯೊಂದಕ್ಕೆ 20,400 ರೂ. ನಂತೆ ಸುಮಾರು ರೂ. 13,24,000 ರಿಪೇರಿಗೋಸ್ಕರ ಇರುವ ಹಣವು ನಷ್ಟವಾಗುತ್ತಿದೆ. ಆದಷ್ಟು ಬೇಗ ಇದನ್ನು ಸರಿಪಡಿಸಬೇಕು. ಅಧಿಕಾರಿಗಳು ಕೆಲಸದ ಬಗ್ಗೆ ಟೆಂಡರ್ ಕರೆಯುವ ಕೆಲಸವನ್ನೂ ಮಾಡಿಲ್ಲ. ಒಟ್ಟಿನಲ್ಲಿ ನನ್ನ ಮೂಲಪ್ರಶ್ನೆ ಆಲೂರು ಸಿದ್ದಾಪುರದಲ್ಲಿ ವೈದ್ಯಾಧಿಕಾರಿಗಳನ್ನು ನೇಮಕ ಮಾಡಿಲ್ಲ, ಅಲ್ಲಿಗೆ ಖಾಯಂ ಆಗಿ ವೈದ್ಯಾಧಿಕಾರಿಗಳನ್ನು ನೇಮಕ ಮಾಡುತ್ತೀರಿ? ಎರಡನೆಯದಾಗಿ ಕೊಡಗು ಜಿಲ್ಲೆಗೆ ಐ.ಪಿ.ಪಿ.ಯ ಅಡಿಯಲ್ಲಿ ಒಂದು ಕೋಟಿ ತೊಂಭತ್ತನಾಲ್ಕು ಲಕ್ಷ ರೂಪಾಯಿ ನಷ್ಟವಾಗುತ್ತಿದೆ.

**ಅಧ್ಯಕ್ಷರು** :- ತಾವು ಮೂಲಭೂತ ಪ್ರಶ್ನೆಯನ್ನು ಕೇಳಬೇಕು. ಎರಡನೆಯ ಪ್ರಶ್ನೆಯಲ್ಲಿ ಜೀಪ್ ಇಲ್ಲ; ಯಾವಾಗ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಜೀಪ್‌ನ್ನು ಕೊಡುತ್ತೀರಿ ಎಂದು ಕೇಳಿದ್ದೀರಿ.

**ಶ್ರೀ ಎಂ. ಪಿ. ಅಪ್ಪಚ್ಚುರಂಜನ್** :- ಅಧ್ಯಕ್ಷರೆ, ಅದು ಎರಡನೆಯ ಪ್ರಶ್ನೆ ಸರಿ. ನಾನು ಉಪಪ್ರಶ್ನೆಯನ್ನು ಕೇಳುತ್ತಿದ್ದೇನೆ. ಜೀಪು ಇಲ್ಲ ಎಂಬ ಬಗ್ಗೆ ಉತ್ತರವನ್ನು ಕೊಟ್ಟಿದ್ದಾರೆ.

**ಅಧ್ಯಕ್ಷರು** :- ನಾನು ಹೇಳುವುದೇನೆಂದರೆ, ಮೂಲ ಪ್ರಶ್ನೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಿದರೆ ಎಲ್ಲಾ ಮಾಹಿತಿ ಮಂತ್ರಿಗಳ ಹತ್ತಿರ ಇರುತ್ತದೆ. ನಿಮಗೆ ಅನುಕೂಲವಾಗುತ್ತದೆ. ನೀವು ಮೂಲ ಪ್ರಶ್ನೆಯನ್ನು ಒಂದು ಸ್ವಭಾವದ್ದು ಹಾಕಿ ಅದಕ್ಕೆ ಸಂಬಂಧವಿಲ್ಲದ ಉಪಪ್ರಶ್ನೆ ಕೇಳಿದರೆ ಮಂತ್ರಿಗಳ ಹತ್ತಿರ ಮಾಹಿತಿ ಇರುವುದಿಲ್ಲ. ತಾವು

ಮೂಲವಾಗಿ ಆಲೂರು ಸಿದ್ದಾಪುರ ಆರೋಗ್ಯ ಕೇಂದ್ರದ ಖಾಲಿ ಇರುವ ಹುದ್ದೆಗಳಿಷ್ಟು ಮತ್ತು ಎರಡನೆಯ ಪ್ರಶ್ನೆಯಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಜೀಪನ್ನು ಒದಗಿಸುವ ಬಗ್ಗೆ ಕೇಳಿದ್ದೀರಿ. ತಾವು ಐ.ಪಿ.ಪಿ. ಬಗ್ಗೆ ಕೇಳಿದರೆ ಮಂತ್ರಿಗಳ ಹತ್ತಿರ ಮಾಹಿತಿ ಇರುವುದಿಲ್ಲ. ಇದ್ದರೆ ಕೊಟ್ಟರೆ ಒಳ್ಳೆಯದು.

+ **ಶ್ರೀ ಎಂ.ಪಿ. ಅಪ್ಪಚ್ಚುರಂಜನ್** :- ಏಕೆಂದರೆ ಕೊಡಗಿಗೆ ಬರುವ 1 ಕೋಟಿ 94 ಲಕ್ಷ ಹೋಗುತ್ತದೆ.

+ **ಹೆಚ್.ಪಿ. ಮಹದೇವಪ್ಪ** :- ಮಾನ್ಯ ಅಧ್ಯಕ್ಷರೆ, 1992 ನೇ ಇಸವಿಯಲ್ಲಿ ಕನಿಷ್ಟ ಕಾರ್ಯಕ್ರಮದ ಆಧಾರದ ಅಡಿಯಲ್ಲಿ ಕೊಡಗು ಜಿಲ್ಲೆಯ ಆಲೂರು ಸಿದ್ಧಾಪುರಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರಾಗಿದೆ. ಅಲ್ಲಿ ಆರು ಹುದ್ದೆಗಳಿವೆ. ಒಬ್ಬರು ವೈದ್ಯರು, ಒಬ್ಬರು ಆರೋಗ್ಯ ಸಹಾಯಕರು, ಗ್ರೂಪ್ 'ಡಿ' ಒಬ್ಬರು, ಕಿರಿಯ ಪ್ರಯೋಗಾಲಯ ತಜ್ಞರು ಒಬ್ಬರು, ಬೆರಳಚ್ಚುಗಾರರೊಬ್ಬರು, ಫಾರ್ಮಾಸಿಸ್ಟ್ ಒಬ್ಬರ ಹುದ್ದೆಯನ್ನು ಮಂಜೂರು ಮಾಡಬೇಕಾಗಿದೆ. ನಮ್ಮ ಇಲಾಖೆಯಲ್ಲಿ ಈಗ ಸಿಬ್ಬಂದಿಯ ನೇಮಕಾತಿ ನಡೆಯುತ್ತಿದೆ. 4371 ಹುದ್ದೆಗಳು ಪ್ಯಾರಾಮೆಡಿಕಲ್ಸ್‌ನಲ್ಲಿ ಖಾಲಿ ಇದೆ. ಕಳೆದ 8-10 ವರ್ಷಗಳಿಂದ ನಮ್ಮಲ್ಲಿ ಯಾವುದೇ ಹುದ್ದೆಗೆ ನೇಮಕಾತಿಯಾಗಿಲ್ಲ. ಈಗ ಹಣಕಾಸು ಇಲಾಖೆಯಿಂದ ಅನುಮತಿ ಪಡೆದುಕೊಂಡು ಸಿಬ್ಬಂದಿಯ ನೇಮಕಾತಿಯ ಪ್ರಕ್ರಿಯೆ ನಡೆಯುತ್ತಿದೆ. ಮೂರು ತಿಂಗಳಿನಲ್ಲಿ ಅಲ್ಲಿ ಇರುವ ಖಾಲಿ ಮೂರು ಹುದ್ದೆಗಳನ್ನು ತುಂಬಲು ಕ್ರಮ ತೆಗೆದುಕೊಳ್ಳುತ್ತೇನೆ. ಕನಿಷ್ಟ ಕಾರ್ಯಕ್ರಮದ ಅಡಿಯಲ್ಲಿ ಮಂಜೂರಾದಂಥ ಆರೋಗ್ಯ ಕೇಂದ್ರಗಳಿಗೆ ಜೀಪನ್ನು ಮಂಜೂರು ಮಾಡುವ ಅವಕಾಶ ಇಲ್ಲ. ಆದರೂ ಕೇಂದ್ರ ಸರ್ಕಾರ ಬೇರೆ ಬೇರೆ ಯೋಜನೆಗಳಲ್ಲಿ ಜೀಪನ್ನು ಮಂಜೂರು ಮಾಡಿದಾಗ ಈ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಆದ್ಯತೆಯನ್ನು ಕೊಡಲು ಪ್ರಯತ್ನ ಮಾಡುತ್ತೇನೆ. ಐ.ಪಿ.ಪಿ. ಕಾರ್ಯಕ್ರಮದ ಅಡಿಯಲ್ಲಿ ರಾಜ್ಯದ ಸುಮಾರು 13 ಜಿಲ್ಲೆಗಳಲ್ಲಿ ಸಬ್ ಸೆಂಟರ್, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡ, ವೈದ್ಯಾಧಿಕಾರಿಗಳ ಕಟ್ಟಡ ಮಾಡಲು ಉದ್ದೇಶಿಸಲಾಗಿದೆ. ರಾಷ್ಟ್ರಮಟ್ಟದಲ್ಲಿ 120 ಕೋಟಿ ರೂಪಾಯಿಗಳ ಈ ಯೋಜನೆ ಮಂಜೂರಾಗಿದೆ. ಆದರ ಅಡಿಯಲ್ಲಿ 13 ಜಿಲ್ಲೆಗಳಲ್ಲಿ ಈ ಕೆಲಸವನ್ನು ಮಾಡಲು ಹಣವನ್ನು ಕೊಟ್ಟಿದ್ದೇನೆ. ನಾನೇ ಸ್ವತಃ ಜಿಲ್ಲಾ ಪರಿಷತ್ ಅಧ್ಯಕ್ಷರನ್ನು ಭೇಟಿ ಮಾಡಿ ಈ ಯೋಜನೆಗೆ ಬೇಕಾದ ಅಂದಾಜು ಮತ್ತು ಇತರೆ ಕರಡನ್ನು ಸರ್ಕಾರಕ್ಕೆ ಶೀಘ್ರವಾಗಿ ಒದಗಿಸಿ ಈ ಕಾರ್ಯಕ್ರಮವನ್ನು ಜರೂರಾಗಿ ತೆಗೆದುಕೊಂಡು ಪೂರೈಸ ಬೇಕೆಂದು ಹೇಳಿದ್ದೇನೆ.

+ **ಶ್ರೀ ಡಿ. ಎಸ್. ಮಾದಪ್ಪ** :- ಮಾನ್ಯ ಅಧ್ಯಕ್ಷರೆ, ಕೊಡಗು ಜಿಲ್ಲೆಗೆ ವಿಶ್ವಬ್ಯಾಂಕ್ ನಿಂದ ಐ.ಪಿ.ಪಿ. ಯೋಜನೆ ಅಡಿಯಲ್ಲಿ ಬಂದಂಥ 1 ಕೋಟಿ 94 ಲಕ್ಷ ರೂಪಾಯಿಗಳ ಹಣವೇನಿದೆ, ಅದರಲ್ಲಿ ವೈದ್ಯಾಧಿಕಾರಿಗಳು, ಆಸ್ಪತ್ರೆಯ ಕಟ್ಟಡ, ವೈದ್ಯಾಧಿಕಾರಿಗಳ ವಸತಿ ಗೃಹದ ಕೆಲಸವನ್ನು ತೆಗೆದುಕೊಳ್ಳಬೇಕು. ನಮ್ಮಲ್ಲಿ ವರ್ಷದಲ್ಲಿ ಮೂರು ತಿಂಗಳು ಮಾತ್ರ ಕೆಲಸ ಮಾಡಲು ಸಾಧ್ಯವಾಗುತ್ತದೆ. ಉಳಿದ ಕಾಲದಲ್ಲಿ ಮಳೆ ಇರುತ್ತದೆ. ತಾವು ಖುದ್ದಾಗಿ ಕೊಡಗು ಜಿಲ್ಲೆಗ ಭೇಟಿ ಕೊಟ್ಟು ಪರಿಶೀಲನೆ ಮಾಡಬೇಕು. ಆ ಮೂರು ತಿಂಗಳಿನಲ್ಲಿ

ಈ ಕೆಲಸವನ್ನು ತೆಗೆದುಕೊಳ್ಳಲು ತಾವು ಖುದ್ದಾಗಿ ಕೊಡಗು ಜಿಲ್ಲೆಗೆ ಭೇಟಿ ನೀಡ ಬೇಕೆಂದು ವಿನಂತಿಸುತ್ತೇನೆ.

**ಶ್ರೀ ಹೆಚ್. ಸಿ. ಮಹದೇವಪ್ಪ** :- ಅಧ್ಯಕ್ಷರೆ, ಐ.ಪಿ.ಪಿ. ಯೋಜನೆಯ ಅನ್ವಯ ಬರುವ ಕೆಲಸಗಳನ್ನು ನೋಡಿಕೊಳ್ಳಲು ಈಗಾಗಲೇ ಪ್ರತ್ಯೇಕವಾಗಿ ಅಡಿಷನಲ್ ಡೈರೆಕ್ಟರ್ ಮತ್ತು ಜಂಟಿ ನಿರ್ದೇಶಕರನ್ನು ನೇಮಕ ಮಾಡಿ ಎಲ್ಲಾ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಪರಿಶೀಲನೆ ಮಾಡಲು ಏರ್ಪಾಡು ಮಾಡಿದ್ದೇನೆ. ಹಾಗೂ ಸಹ ಮಾನ್ಯ ಸದಸ್ಯರ ವಿನಂತಿ ಮೇರೆಗೆ ಕೊಡಗು ಜಿಲ್ಲೆಗೆ ಭೇಟಿ ಮಾಡುತ್ತೇನೆ.

**ಶ್ರೀ ಹೆಚ್. ಡಿ. ಬಸವರಾಜ್** :- ಮಾನ್ಯ ಅಧ್ಯಕ್ಷರೆ, ಕೊಡಗು ಜಿಲ್ಲೆಗೆ ವೈದ್ಯಾಧಿಕಾರಿಗಳನ್ನು ನೇಮಕ ಮಾಡುವ ಬಗ್ಗೆ ಚರ್ಚೆ ಮಾಡುತ್ತಿರುವ ಈ ಸಂದರ್ಭದಲ್ಲಿ ನನ್ನ ಕ್ಷೇತ್ರಕ್ಕೆ ಸೀಮಿತವಾಗಿ ವಿಷಯವೊಂದನ್ನು ಪ್ರಸ್ತಾಪ ಮಾಡಲು ಇಚ್ಛಿಸುತ್ತಿದ್ದೇನೆ. ಕಾನೂರಿನಲ್ಲಿ 1994 ರಲ್ಲಿ ಅತ್ಯುತಮವಾದಂಥ ಕಟ್ಟಡವನ್ನು ಕಟ್ಟಿ ಆಗ ಇದ್ದಂಥ ಸಚಿವರು ಉದ್ಘಾಟನೆ ಮಾಡಲು ಹೋದಾಗ ಅಲ್ಲಿ ಯಾವುದೇ ವೈದ್ಯಾಧಿಕಾರಿಗಳು ಇಲ್ಲದೆ ಇದ್ದುದರಿಂದ ಕೇವಲ ಅಲಂಕಾರಕ್ಕಾಗಿ ಆಸ್ಪತ್ರೆಯನ್ನು ಉದ್ಘಾಟನೆ ಮಾಡುವುದ ರಿಂದ ಪ್ರಯೋಜನವಾಗುವುದಿಲ್ಲವೆಂದು ಅಲ್ಲಿನ ಸಾರ್ವಜನಿಕರು ವಿರೋಧವನ್ನು ವ್ಯಕ್ತ ಮಾಡಿದರು. 1994 ರಿಂದ ಇಲ್ಲಿಯವರೆಗೂ ಇಲಾಖೆಯವರು ಯಾವುದೇ ವೈದ್ಯಾಧಿಕಾರಿ ಯನ್ನು ಅಲ್ಲಿಗೆ ನೇಮಕ ಮಾಡಲು ಕ್ರಮವನ್ನೇಕೆ ತೆಗೆದುಕೊಂಡಿಲ್ಲವೆಂಬುದು ಅರ್ಥ ವಾಗುತ್ತಿಲ್ಲ. ಸಚಿವರು ನಮ್ಮ ತಾಲ್ಲೂಕಿಗೆ ಬಂದಂಥ ಸಮಯದಲ್ಲೂ ಇದರ ಬಗ್ಗೆ ಅವರೊಂದಿಗೆ ಪ್ರಸ್ತಾವನೆ ಮಾಡಿದ್ದೇನೆ. ಆದರೂ ಇಲ್ಲಿಯವರೆಗೆ ವೈದ್ಯಾಧಿಕಾರಿಯನ್ನು ನೇಮಕ ಮಾಡಿರುವುದಿಲ್ಲ. ಆದ್ದರಿಂದ 1994 ರಲ್ಲಿ ಔಪಚಾರಿಕವಾಗಿ ಅಲ್ಲೇನು ಕಟ್ಟಡ ಉದ್ಘಾಟನೆಯಾಗಿ ನಿಂತಿದೆ ಅಲ್ಲಿಗೆ ಈ ಕೂಡಲೇ ಸಾರ್ವಜನಿಕರ ಹಿತಾಸಕ್ತಿಯಿಂದ ವೈದ್ಯಾಧಿಕಾರಿಗಳನ್ನು ನೇಮಕ ಮಾಡಬೇಕಾಗಿ ವಿನಂತಿಸುತ್ತೇನೆ. ಮತ್ತು ತಾಲ್ಲೂಕು ಆಸ್ಪತ್ರೆಯ ಶುಚಿತ್ವದ ಬಗ್ಗೆ ಹೇಳುವುದಾದರೆ ಬಹಳಷ್ಟು ಶೋಚನೀಯವಾದ ಸ್ಥಿತಿಯಲ್ಲಿದೆ.

**ಶ್ರೀ ಹೆಚ್. ಸಿ. ಮಹದೇವಪ್ಪ** :- ಅಧ್ಯಕ್ಷರೆ, ಮಾನ್ಯ ಸದಸ್ಯರ ಜೊತೆಯಲ್ಲಿ ಅವರ ಕ್ಷೇತ್ರಕ್ಕೆ ಹೋಗಿದ್ದೆ. ಅವರು ಅಲ್ಲಿ ಇದರ ಬಗ್ಗೆ ಪ್ರಸ್ತಾವನೆಯನ್ನು ಕೊಟ್ಟಿದ್ದಾರೆ. ನಾನು ತಕ್ಷಣ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟು ಕೂಡಲೇ ಗುತ್ತಿಗೆ ಆಧಾರದ ಮೇಲೆ ವೈದ್ಯಾಧಿಕಾರಿಗಳನ್ನು ನೇಮಕ ಮಾಡಬೇಕೆಂದು ಹೇಳಿದ್ದೇನೆ. ಈಗಾಗಲೇ ಕೆ.ಪಿ.ಎಸ್.ಸಿ. ಯಲ್ಲಿ ವೈದ್ಯಾಧಿಕಾರಿಗಳ ನೇಮಕಾತಿಯ ಪ್ರಕ್ರಿಯೆ ನಡೆಯುತ್ತಿದೆ, ಆದಷ್ಟು ಬೇಗ ಆಯ್ಕೆಯಾದ ಪಟ್ಟಿಯನ್ನು ನನಗೆ ಕೊಡಬೇಕೆಂದು ದೂರವಾಣಿಯಲ್ಲಿ ಮಾತನಾಡಿದ್ದೇನೆ. 3-4 ತಿಂಗಳುಗಳಲ್ಲಿ ಈ ಸಮಸ್ಯೆ ನಿವಾರಣೆಯಾಗುತ್ತದೆಂದು ಮಾನ್ಯ ಸದಸ್ಯರಿಗೆ ಭರವಸೆ ನೀಡುತ್ತೇನೆ. ಅಲ್ಲದೆ ರಾಜ್ಯದ ಎಲ್ಲಾ ಆಸ್ಪತ್ರೆಗಳಲ್ಲಿ ಎಲ್ಲಾ ವೈದ್ಯರುಗಳಿಲ್ಲದಂತೆ ಮಾಡಲು ಸಾಧ್ಯವಾಗುವುದಿಲ್ಲ. ಕಾರಣ ಪ್ರತಿ ವರ್ಷ 150 ರಿಂದ 200 ಮಂದಿ ವೈದ್ಯರು ಉನ್ನತ ವ್ಯಾಸಂಗಕ್ಕಾಗಿ ಹೊರದೇಶಕ್ಕೆ ಹೋಗುತ್ತಿರುವುದರಿಂದ ಆ ರೀತಿ ತೊಂದರೆಯಾಗುತ್ತದೆ. ಆದರೆ ತಾತ್ಕಾಲಿಕ ವ್ಯವಸ್ಥೆಯನ್ನು ಮಾಡಲಾಗುತ್ತದೆ.

**ಶ್ರೀ ಬಿ. ಎಸ್. ಯಡಿಯೂರಪ್ಪ** :- ಮಾನ್ಯ ಅಧ್ಯಕ್ಷರೆ, ಅವರು ಕೇಳುತ್ತಿರತಕ್ಕದ್ದು

ಹೊಸ ಆಸ್ಪತ್ರೆಯ ಬಗ್ಗೆ. ಮೂರ್ನಾಕು ವೈದ್ಯರುಗಳಿರುವ ಕಡೆ ಒಂದೆರಡು ಹುದ್ದೆ ಖಾಲಿ ಇದ್ದರೆ ಭರ್ತಿ ಮಾಡುತ್ತೀರಿ. ಆದರೆ ಅಲ್ಲಿ ಆಸ್ಪತ್ರೆ ಪ್ರಾರಂಭವಾಗಬೇಕು, ಯಾರಾದ ರೊಬ್ಬರು ವೈದ್ಯರನ್ನು ಅಲ್ಲಿ ಕೂಡಲೇ ಹಾಕಿಕೊಡುವ ವ್ಯವಸ್ಥೆ ಮಾಡಬೇಕು. ಆಸ್ಪತ್ರೆಯ ಕಟ್ಟಡವಾಗಿದೆ, ಎರಡು ವರ್ಷಗಳಿಂದ ವೈದ್ಯರನ್ನು ನೇಮಕ ಮಾಡಿಲ್ಲವೆಂದರೆ ಹೇಗೆ?

**ಅಧ್ಯಕ್ಷರು** :- ಗುತ್ತಿಗೆ ಆಧಾರದ ಮೇಲೆ ವೈದ್ಯರುಗಳ ನೇಮಕಾತಿ ಮಾಡುತ್ತಿದ್ದಾರೆ, ಜೊತೆಗೆ ಕೆ.ಪಿ.ಎಸ್.ಸಿಯಿಂದ ನೇಮಕ ಮಾಡುತ್ತಿರುವುದಾಗಿ ಹೇಳಿದ್ದಾರೆ.

**ಶ್ರೀ ಹೆಚ್. ಸಿ. ಮಹದೇವಪ್ಪ** :- ಮಾನ್ಯ ಅಧ್ಯಕ್ಷರೇ, ಹೊಸಪೇಟೆಯ ಆಸ್ಪತ್ರೆಯಲ್ಲಿ ಕ್ಷ-ಕಿರಣಯಂತ್ರ ಬಹಳ ದಿವಸಗಳಿಂದ ಕೆಟ್ಟು ಹೋಗಿದೆ. ಅದನ್ನು ರಿಪೇರಿ ಮಾಡಲು ಬೆಂಗಳೂರಿನಿಂದಲೇ ಬರಬೇಕೆಂದು ಹೇಳುತ್ತಾರೆ. ಒಂದು ವರ್ಷವಾಗಿದ್ದರೂ ರಿಪೇರಿಯಾಗಿಲ್ಲ.

**ಅಧ್ಯಕ್ಷರು** :- ಅದರ ಬಗ್ಗೆ ಅವರ ಹತ್ತಿರ ಮಾಹಿತಿ ಇರುವುದಿಲ್ಲ. ತಾವು ಪ್ರತ್ಯೇಕವಾಗಿ ಪ್ರಶ್ನೆ ಕೇಳಿ.

**ಶ್ರೀ ಹೆಚ್. ಸಿ. ಮಹದೇವಪ್ಪ** :- ಹೊಸಪೇಟೆಯ ಆಸ್ಪತ್ರೆಗೆ ನಾನು ರಾತ್ರಿ ಪಂಚೆ ಉಟ್ಟುಕೊಂಡು ಟವಲ್ ಕಟ್ಟಿಕೊಂಡು ಹೋಗಿದ್ದೇನೆ. ಮಾನ್ಯ ಸದಸ್ಯರಿಗೂ ಗೊತ್ತಿದೆ. ಅಲ್ಲೇನು ಕ್ಷ-ಕಿರಣ ಯಂತ್ರ ಕೆಟ್ಟುಹೋಗಿದೆ. ಅದರ ಬಗ್ಗೆ ವರದಿಯನ್ನು ತರಿಸಿಕೊಂಡು ಸರಿಪಡಿಸಲು ಪ್ರಯತ್ನ ಮಾಡುತ್ತೇನೆ. ಪರಿಸ್ಥಿತಿಯೇನಿದೆ ಅದನ್ನು ನೋಡಿ ಕ್ರಮ ತೆಗೆದುಕೊಳ್ಳುತ್ತೇನೆ.

**ಶ್ರೀ ಎಂ.ಪಿ. ಅಪ್ಪಚ್ಚುರಂಜನ್** :- ಅಧ್ಯಕ್ಷರೇ, ಗಂಡ ಹೆಂಡಿರ ಜಗಳದಲ್ಲಿ ಕೂಸು ಬಡವಾಯಿತು ಎಂಬಂತೆ ಆಗಬಾರದು. ನಮ್ಮ ಕೊಡಗಿನ 1 ಕೋಟಿ 94 ಲಕ್ಷ ರೂಪಾಯಿ ನಷ್ಟವಾಗಬಾರದು ಇದರ ಬಗ್ಗೆ ಸರ್ಕಾರ ಗಮನಹರಿಸಬೇಕು.

**ವಿಷಯ :- ಪ್ರತಿ ಗ್ರಾಮಗಳಲ್ಲಿ ಗಾಂಧಿ ಭವನಗಳನ್ನು ಕಟ್ಟುವ ಬಗ್ಗೆ.**

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 208 (1396)

ಶ್ರೀ ಎಂ. ಚಂದ್ರಪ್ಪ (ಭರಮಸಾಗರ) :- ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅಂಬೇಡ್ಕರ್ ಮಾದರಿಯಲ್ಲಿ ಪ್ರತಿ ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಗಾಂಧಿ ಭವನಗಳನ್ನು ಕಟ್ಟುವ ಬಗ್ಗೆ ಸರ್ಕಾರದವರು ಯೋಚಿಸಿರುವರೇ?

ಆ) ಗಾಂಧಿ ಭವನ ಕಟ್ಟುವುದರಿಂದ ಹಳ್ಳಿಗಳಲ್ಲಿರುವ ಸಾರ್ವಜನಿಕರಿಗೆ ಸಭೆ ಸಮಾರಂಭಗಳನ್ನು ನಡೆಸಲು ಅನುಕೂಲವಾಗುತ್ತದೆ ಎಂಬುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?